Lahari
COMMUNIQUE
Its Unique!
Volume : 1
July - 2010
Part 2
Price : Rs. 5

## Judges will be made accountable soon: Moily

Union law minister, M. Veerappa Moily told PTI in an interview that the Judicial Standards and Accountability Bill, 2010, had been finalised after exhaustive studies by a Group of Ministers (GoM) to which it was referred.

Moily said that the bill will facilitate the judiciary to ensure that nobody points any finger at them, the Bill is a result of an exhaustive study of eight months and they have examined various legislations of the world to draft it.

Several cabinet members had found flaws in the Bill when it came up before the Union cabinet earlier. Home minister, P. Chidambaram and HRD minister, Kapil Sibal, both lawyers, had pointed out defects in the bill, particularly on the quantum of punishment of minor reprimands for an erring judge.

Subsequently, a GoM, headed by agriculture minister, Sharad Pawar and including Chidambaram, Sibal and Moily, was formed to deliberate on the contentious legislation.

The bill proposes to set up a National Judicial Oversight Committee, likely to be headed by the Vice-President in his capacity as the Chairman of Rajya Sabha with distinguished jurists as members that will receive complaints against the sitting judges.

## Statutory recognition to Unique Identification Authority of India

Unique Identification Authority of India (UIDAI) headed by Nandan Nilekani has been granted statutory recognition under a yet to be enacted law.

The law in the form of Bill, titled National Identification Authority of India Bill, 2010 proposes to make the UIDAI a statutory body. The draft bill has been released by law ministry inviting public comment.

Prevention of misuse of data, impersonation, and breach of privacy has been given top priority in the Bill. Such misuses have been declared to be offences. Different offences under the Act will attract different kinds of punishment ranging from fine of Rs. Ten thousand to 1 crore and jail term ranging upto 3 years.

The draft bill proposes strict penalty for offences like disclosing identity information, impersonation, breach of privacy, giving wrong bio-metrics and unauthorised access to data.

The draft law says that if any person "intentionally discloses, transmits, copies or otherwise disseminates any identity information collected in the course of enrolment or authentication to any person not authorised", he will be punished by imprisonment for a term which may extend to three years or with a fine which may extend to Rs 10,000.

## Conflicting decisions- divorce matter goes to larger bench

The Supreme Court has referred an interesting question of law relating to divorce by mutual consent under Hindu Marriage Act to be decided by a large bench.

The Supreme Court noted three conflicting decisions on the point and hence required the Chief Justice of India to constitute a larger bench to examine the issue.

The issue arose when a Bangalore based couple wanted divorce by mutual consent. When they approached the Court through Lok Adalat, the Court noticed its three earlier judgments on the point of waiving off 6 months mandatory period before granting a decree of divorce even in cases where both parties consent to divorce.

In the Anjana Kishore Vs Puneet Kishore case, a three-judge bench of Court waived off the six month period for granting the decree of divorce by exercising its extraordinary powers under Article 142 of the Constitution.

Thereafter, all most every high Court purporting to be exercising power under Art. 226 of Constitution of India and even matrimonial Courts purporting to exercise inherent powers started granting divorce decrees without waiting for the mandatory period to complete.

Subsequently, in the Anil Kumar Jain vs Maya Jain case, another three-judge bench of the Supreme Court opined that only the Supreme Court has the power to waive off the six month period and not any other Courts.

More recently, in the Manish Goel Vs Poonam case, another three-judge bench held that even the Supreme Court cannot waive off the six months period under Article 142 as the power cannot be exercised in contravention of the statutory provisions provided under section 13-B(2) of the Hindu Marriage Act, 1955.

In view of these conflicting decisions, now the complicated question of law will go before a larger bench.

## Caste census: Decision based on GoM

The cabinet headed by Prime Minister Manmohan Singh referred the issue of caste-based census to a Group of Minister (GoM). The GoM is headed by Pranab Mukherjee.

The issue of caste-based census has seen dissent in the cabinet on both the occasions it was brought up and also caused a rift in political parties. Therefore, now the GoM will examine the modalities of caste-based census and submit a report on which a final decision will be based.

In a related development a bench of Madras High Court delivering verdict in a PIL has directed the Government of India to do headcount based on caste.

*National Litigation Policy aiming to reduce the average pendency time of cases from 15 to 3 years will be implemented from 1st July.*

*25 June 2010 marked 35th anniversary of the Emergency that was imposed on India after Indira Gandhi lost an election petition in Allhabad High Court.*

*IAF has started giving permanent commission to women officers pursuant to an order from division Bench of the Delhi High Court.*

*Amnesty International has slammed Pak government for "effectively abandoning" its citizens from the tribal belt and not caring for their human rights.*

*The purpose of law is to prevent the strong always having their way -Ovid*

Editor Speaks

# Government to tread cautiously on nuke bill

Parliamentary Standing Committee on Science and Technology which is currently examining the provisions of the controversial bill, Civil Liability for Nuclear Damage Bill, 2010, would do well to tread cautiously on the bill and not to endorse it in the present form. The Nuclear Liability Bill seeks to provide for limited civil liability in case of a nuclear disaster from reactors. The Bill limits civil liability of the tort-fesor to pay compensation upto Rs. 500 crores maximum. This amount of compensation is paltry compared to the kind of damage radiation leakage is likely to cause. The damage will continue for many years to come.

The Government of India should learn hard lessons from what happened in Bhopal gas tragedy case.

The Bill in the present form is not acceptable for two reasons.

Firstly, the Bill in the present form, would put more burden on Indian tax payers to shoulder the compensation package than on foreign commercial nuclear plant operator. The commercial plant operators' liability any way would not exceed Rs.500 crores irrespective of the amount of damage caused to life and property by such operator in case of leakage of radiation.

Secondly, the Bill proposes to set up a separate tribunal, Nuclear Damage Claims Commission (NDCC) to adjudicate the dispute. This would take away the jurisdiction of civil Courts which are guided not only by the statute of Parliament but also by principles of common law to grant and enhance both interim and final compensation. The Tribunal would not have such jurisdiction.

Prithviraj Chavan, minister of state for science and technology and the prime minister's office (PMO) did well to say the government would take a re look at all aspects of the bill. "Bhopal has taught us that we are unprepared," he is reported to have said. It is hoped that this caution guides not only the Standing Committee but also the Government which commands majority in the Parliament to get enacted any law it wants.

# Random Reflections

Month of June has been consumed by the media as well as the people in the know of the things to castigate the decision of the bench headed by Justice A.M.Ahmadi, the then CJI, in modifying the charge against the accused in Bhopal gas tragedy case from one of *Culpable Homicide not amounting to murder* to that of *criminal negligence* resulting in awarding only two years sentence against them by the Bhopal Chief Judicial Magistrate. Common people may not be aware that it is the maximum punishment provided for the said offence. The union law minister Veerappa Moily went to the extent of saying that the verdict has buried the justice. The Group of Ministers (GoM) set up by the Prime Minister, Dr.Manmohan Singh has recommended to file a curative petition questioning the earlier judgment of the SC.



K.Suryanarayana Rao
9845529448

Knowledgeable people know how the Apex Court deals with matters coming before it more so the special leave petitions (SLPs). In fact the bench which considers such petitions, normally, does not give reasons while dismissing such petitions. There is also no legal requirement to give such reasons. It is left to the imagination of instructing counsel to explain to the litigant such non existent reasons as to why his petition was rejected.

Incidentally during the month of April a four judge bench of the apex Court comprising Chief Justice K.G.Balakrishnan, Justice S.H.Kapadia, Justice Altamas Kabir and Justice R.V.Raveendran had to set at free four of the accused after noticing that the judgment delivered by a bench of three judges headed by Justice Arijit Pasayat on November 7, 2009 was wrong in which the accused had been convicted without even hearing them even when the State had not preferred any appeal against the judgment of MP High Court. You call this a case which has been the result of a naïve, abrasive or casual approach? Who are answerable to the continued illegal confinement of the accused? If there is executive excess you can approach the Court, if it is the result of judicial tyranny where the aggrieved person should go? What should happen to the life and liberty of an innocent individual in respect of the later category of cases?

Take the instance of matrimonial cases. Recently a bench comprising Justice D.K.Jain and Justice C.K.Prasad said there is a need to have a `clear ruling' as there had been conflicting decisions by different benches of the Court on the same issue. The matter arose before the apex Court in a divorce petition under Section 13(1)(B) of the Hindu Marriage Act, 1955 as to whether the six months waiting period is compulsory where it involves a consent petition filed by the spouses. In Anjana Kishore Vs Puneet Kishore case a three judge bench while exercising the Court's extra-ordinary power under Article 142 of the Constitution waived the waiting period following which several divorces were granted by various high Courts and the family Courts. It may be by wrong appraisal or interpretation of the judgment also. Subsequently, in the case of Anil Kumar Jain Vs Maya Jain another three judge bench clarified that only the apex Court has such power of waiver but not the high Court and matrimonial Courts. In the latter case of Manish Goel Vs Poonam another three judge bench held that even the Supreme Court can not waive off the six month waiting period under Article 142 of the Constitution. It is possible that at the level of family Courts each of these judgments can be relied upon without being aware of the conflicting judgments of the Apex Court and the result of cases may be different and varied. In the first instance why such inconsistencies at the highest level? Why can't the previous judgment be considered while delivering the latter judgments?

The common man has no where to go except the judiciary. In large number of cases the litigant will not have wherewithal to approach the highest Court of the land. Therefore, he expects the Apex Court to be considerate, consistent and not adopt a casual approach when he approaches the apex Court. It is in this regard, Jackson was not wrong when he said that the Supreme Court is not final because it is infallible; the court is infallible because it is final.

*The State of MP to move curative petition in Supreme Court questioning the correctness of a 1996 decision by Chief Justice A.M.Ahmadi that had watered down charges to criminal negligence in Bhopal gas tragedy case.*

*A US Court has granted preliminary injunction against Indian drugmaker, Dr. Reddy's Laboratories restraining them from distributing a generic version of allergy drug Allegra-D.*

*Vacation bench of the SC on 15th June stayed the interim orders of a bench consisting of J| D V Shylendra Kumar, questioning the administrative decisions of Chief Justice P D Dinakaran.*

*'Chief Justice of Karnataka HC should have been shifted long time back', said Senior Advocate and former Advocate General B.V.Acharya in an interview.*

***In the 9th annual general body meeting of Lahari Advocates Forum held on 19.02.2010, the life membership fee is enhanased to Rs.1,000/- from present fee of Rs. 500/-. Members are requested to pay the difference amount & co-operate.***

## Around the Courts

***Sec. 357(3) Cr.P.C- Compensation to victim of crime – objects.***

***Sec. 431 Cr.P.C – mode of recovery of compensation granted under Sec. 357(3)***

Interpreting the provisions of law contained in Sec. 357(3) and Sec. 431 of Cr.P.C, the Supreme Court has delivered a judgment during second week of May 2010. The Court felt that the whole purpose of Sec. 357(3) of Cr.P.C is accommodate the interest of the victim in the criminal justice system. The Court further felt that some times the situation becomes such that no purpose is served by keeping a person behind bars and in such situations court should impose fine in lieu of sending the convict to jail or in addition to very light sentence of imprisonment. The Court also opined that not imposing a sentence of imprisonment in default would mean allowing the accused to get away without paying the compensation and imposing another fine would be impractical.

*(2010 AIR SCW 3398)*

***Sec. 16 of Hindu Marriage Act, 1955 - legitimacy and right to property of children bourn out of void or voidable marriages and children born out of live-in-relationship – fiction of legitimacy created by Sec. 16***

Examining the fiction of legitimacy created by Sec. 16 of Hindu Marriage Act, 1955 in favour of a child born out of void or voidable marriage and child born out of live-in-relationship, the Supreme Court has clarified that the legal fiction operates in a limited sphere restricting the right of such child in the property of parents only.

On facts, the Court decided that when one of the parties is married to another spouse and such marriage is subsisting, merely because of a long live-in-relationship between the parties, their marriage can not be presumed.

*(2010 AIR SCW 3503)*

## Withdrawal of agency licenses not to affect policies : IRDA

Insurance Regulatory and Development Authority (IRDA) has withdrawn licenses of over 4,200 corporate insurance agents including HDFC Bank, Indiabulls Insurance Advisors and Indian Overseas Bank, but that does not affect policies issued by these agents, said the Chairman J Hari Narayan.

These corporate entities acting as agents for different insurances companies failed to renew their licenses. There are about 7000 corporate agents across the country. Out of them 4261 agents failed to renew their licenses.

IRDA has made it clear that the licenses of the corporate agents would not be renewed with retrospective effect.

"The licenses of the corporate agents will not be renewed with retrospective effect. The insurance policies will remain valid... the respective insurance companies will assign another agent," IRDA Chairman told PTI. He further said "the clients (insurance customers) should not do business with them (4,261 corporate agents). They have not applied for renewal of licenses, so there licenses currently stands cancelled,"

HDFC Bank, the Indian Overseas Bank, Oswal Consultancy, India Bulls Insurance Advisors, Bharat Overseas Bank, Max Healthcare Institute, Indian Medical Association (Pune) and Edelweiss Capital are some of the corporate agents who have lost their license.

## Bhopal Tragedy

### from different angles

Former Chief Justice of India CJI) P.N. Bhagwati, who laid the foundation of the principle that a negligent company is liable to pay compensation according to its capacity, is `shocked' at the judgment in the Bhopal gas tragedy case. He further said "our judicial thinking is not to be constricted by reference to the law as it prevails in England or for that matter in any other foreign country. We cannot countenance an argument merely because the new law does not recognise the rule of strict and absolute liability in cases of hazardous or dangerous liability."

◆◆◆

Former CJI, AM Ahmadi, who headed the bench that converted the charge of culpable homicide to negligence against Bhopal gas crime perpetrators, has said he can only feel sorry for the victims. Standing by his judgment in 1996, Ahmadi said the charge of culpable homicide couldn't be attracted in this case.

◆◆◆

"Surely justice has been done," said the Chief Judicial Magistrate Mohan P Tiwari who pronounced the verdict in Bhopal gas tragedy case.

◆◆◆

"This is one such case where justice is delayed and practically denied. I would like to say justice is buried," said Union Law Minister Veerappa Moily.

◆◆◆

"Union Carbide and its officials were not part of this case since the charges were divided long ago into a separate case. Furthermore, Union Carbide and its officials are not subject to the jurisdiction of Indian court since they did not have any involvement in the operation of the plant, which was owned and operated by the Union Carbide India Limited," says a press release of Union Carbide Corporation.

*Union Carbide India Limited is the wholly owned subsidiary of Union Carbide Corporation.*

◆◆◆

When asked by a correspondent that given your credentials as a human rights defender, do you, in retrospect, wish you hadn't accepted that brief?, Fali Sam Nariman who represented the Union Carbide Corporation in civil litigation before the Supreme Court said, "as the poet says: We look before and after and pine for what is not….."

## EVENTS & HAPPENINGS

On 03.06.2010 Shri.J| R.V.Ravindran of Supreme Court addressed the members of the Bar in Vakeelara Bhavana, Bangalore.

On 04.06.2010 All India Lawyers' Union had organized a symposium on 60 years working of the Indian Constitution in Shikshakara Sadana, Bangalore. The function was presided over by K.Subba Rao, Senior Advocate and President of AILU, Karnataka chapter.

On 04.06.2010 AAB, and Lawyers' Law Book jointly hosted a function to release a Kannada book titled, Jameenina Vidhi Vidhanagalu, authored by H.M.Veerabhadraiah, Advocate, Harapanahalli.

From 14th to 18th June, 2010 Art of Living Part I programme was conducted in AAB Hall 2 in High Court Unit

*Amin Solkar, of 25 years' standing and Farhana Shah are two advocates appointed by Bombay HC to argue Kasab's appeal.*

*Justice Mohit Shah took oath as the chief justice of Bombay high court on, June 26, 2010*

*Justice MY Eqbal was sworn-in as the Chief Justice of the Madras High Court on 11th June.*

## Foreign Panorama

# 3 judges killed in Chinese court shootout

On 1st June a man firing a small automatic weapon burst into a court office in central China fatally shooting three judges and wounding three other people before killing himself. The incident happened in Lingling district Court in Yongzhou in Central Chinese Hunan province.

The official Xinhua News Agency has reported that the man was upset over the court ruling in a property division dispute three years ago between him and his wife, who were going through a divorce.

The assailant fired the gun after breaking into the office on the fourth floor, killing the three judges and wounding three court staff. The official said the judges were discussing a case unrelated to the assailant.

Zhu, who lived with his elderly parents after the divorce, apparently held a grudge against the court because of its property decision. The judges Zhu attacked were not involved in his earlier case.

Though private gun ownership is virtually banned in China, the country has seen a rise in violent crimes amid the free-market reforms of recent years and a loosening of social controls.

The Department of Law and Human Rights, Govt of Karnataka, has appointed the following Advocates as Special Public Prosecutors to function in the courts shown against their names for a period of two years or till further order whichever is earlier.

| | |
|---|---|
| Shri.H.M.Rudra Kumar | I FTC Bangalore City |
| Smt.Jayashree R.S. | XV FTC Bangalore City |
| Smt. Shantha Kom Ramalingareddy | XVI FTC Bangalore City |

# Juvenile Justice Act to undergo changes

The Government has finally made up its mind. The present Juvenile Justice Act, 1986 which is not in sync with latest developments in the field of care and welfare of child found to be suffering from physical or mental illness is all set to undergo major changes.

The draft bill to amend the Juvenile Justice (care and protection of children) Act, provides for treatment of mentally ill minor children instead of sending them to mental asylums.

The Union law ministry, with which the amendment is under consideration, has advised amending Sec. 48(2) of the Act to make it more humane in approach towards juvenile or child found to be suffering from leprosy, sexually transmitted disease, Hepatitis B, open cases of Tuberculosis and of unsound mind. Under the amended law the authorities are mandated to provide treatment to such juvenile.

Similarly Sec. 58 is also likely to undergo change making it mandatory for authorities to send to a psychiatric hospital or nursing home a child found to be mentally ill or addicted to alcohol or drugs, leading to behavioral changes.

At present the provisions do not provide for treatment to physically or mentally ill juvenile.

This is for the second time that the Juvenile Justice Act is undergoing amendment. It was earlier amended in 2000.

**HUMOUR**

Dad : Whats your result ?
Son : Dad, I failed in five subjects.
Dad : From now onwards don't call me Dad.
Son : Oh! Come on Dad! Its my school test not DNA test!

## Lahari Book Bank

*"Books are the legacies that genius leaves to mankind, to be delivered down from generation to generation, as presents to those that are yet unborn." - **Joseph Addison***

BEAULA SINGH
beaulajemima@gmail.com

The Lahari Book Bank, a novel concept conceived by K.Suryanarayana Rao, the founder of Lahari movement was launched on 9th March 2009.

The Lahari Book Bank is dedicated to educating and motivating the legal fraternity, being a sincere endeavor to inculcate in them the pleasures and significance of reading those kind of books that would enlighten minds and provide a constant source of inspiration to its readers.

Presently the Lahari Book Bank has about 34 books mostly comprising of biographies and autobiographies of luminaries in the legal arena. These books were graciously contributed by admirable persons of the fraternity who felt the need to infuse in each one of us a passion for reading. One important trait that a lawyer ought to possess is that of articulation which certainly springs from reading.

Erica Jong quotes "Books go out into the world, travel mysteriously from hand to hand, and somehow find their way to the people who need them at the times when they need them". The Lahari Book Bank consist of autobiographies and biographies that are enticingly well written and not only adds a human dimension with life's narratives but also whets the appetite. So we ought to make use of these books that enrich us invaluably. Needless to say, reading expands the mind, it develops intellectual curiosity, helps you draw your own conclusions, consequently driving you to excel in your profession.

To conclude, the Lahari Book Bank invites each and everyone of the legal fraternity to become members of the Book Bank and encourage one another to gain knowledge and carry forth the rich legacy of principles and values enshrined in the pages of these books.

### *Books available in the Bank*

- **My Own Bosewell** -M.Hidayatullah
- **My Life Law and Other Things** -Motilal.C.Setalvad
- **Neither Roses Nor Thorns** -H.R.Khanna
- **Experiments in Advocacy** -Dr.Kailas Nath Katju
- **Badruddin Tyabji** -Laeeq Futehally
- **The Prosecutors** -James Stewart
- **The Mammoth Book of Famous Trials** -Roger Wilkes
- **Humour in Courts ~compiled by** -K.Suryanarayana Rao
- **The Story of My Experiments with Truth** -M.K.Gandhi
- **Nani A. Palkhivala~A Life** -M.V.Kamat
- **Courting Destiny ~A Memoir** -Shanti Bhushan
- **Random Reflections** -Justice V.R.Krishna Iyer
- **V.R.Krishna Iyer~A Living Legend** -P.Krishnaswamy
- **Off the Bench** -Justice V.R.Krishna Iyer
- **Evoking H.M.Seervai** -Feroza H.Seervai
- **Turning Point** -Prof.S.Surya Prakash
- **Roses in December** -M.C.Chagla
- **The Discipline of Law** -Lord Denning
- **The Due Process of Law** -Lord Denning
- **The Closing Chapter** -Lord Denning
- **What Next in the Law** -Lord Denning
- **Land Marks in the Law** -Lord Denning
- **Vakeelarobbara Vagairegalu** -C.H.Hanumatharaya
- **Constitutional Perspectives Essay in Honour and Memories of H.M.Seervai** -Venkat Iyer
- **The Idea of Jutice** -Amarthya Sen
- **Nani Palkhivala~selected writings** -H.Sanghvi, M.R.Pai, S.Ramakrishnan

**Obituary**

**We regret to inform the sad demise of the following person**

- ***On 24.05.2010 R.Vijay Kumar(72), Advocate, expired***
- ***On 04.06.2010 B Venkata Swamy, Advocate, expired at Bangalore***
- ***On 16.06.2010 Rangaiah, Advocate, expired***
- ***On 17.06.2010 R.B.Venkataramana, Advocate, expired.***

**Published by** : S. N. Prashanth Chandra, Lahari Advocates Forum, No. 2980, "Laxmideep", 17th Cross, K.R. Road, BSK II Stage, Bangalore-560 070
**Printed at** : Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
**Editor : Aravind. M. Neglur.** aravindneglur@gmail.com **KARBIL 01707 / 10 /1/2009-TC**

# ಲಹರಿ ಸಂವಾದ

ಸಂಪುಟ – ೧ | ಶ್ರೀ ವಿಕೃತಿ ನಾಮ ಸಂವತ್ಸರ ಆಷಾಢ – ಜೇಷ್ಠ | ಸಂಚಿಕೆ – ೨



**ಒಳಗೇನಿದೆ?**

ಪುಟ ೧ : ಉಪ್ಪಿನಕಾಯಿ, ತಿಂಗಳ ಸುದ್ದಿ

ಪುಟ ೨ : ಪ್ರಚಲಿತ, ಸುದ್ದಿ

ಪುಟ ೩ : ಸಾಂಸ್ಕೃತಿಕ ಆಯಾಮ, ಅಂಕಣ

ಪುಟ ೪ : ನ್ಯಾಯಾಲಯದ ಅಂಗಳದಿಂದ, ಸುದ್ದಿ, ತಪ್ಪೋಲೆ


## ಉಪ್ಪಿನಕಾಯಿ

### ನೇಣು ಕುಣಿಕೆ ತಪ್ಪಿಸಿಕೊಂಡ ಕೊಲೆಗಡುಕರು

*ಸುಧಾರಿಸಿ ಸಮಾಜದ ಮುಖ್ಯವಾಹಿನಿಗೆ ತರುವ ವಿಶ್ವಾಸ*

ಹನ್ನೊಂದು ವರ್ಷಗಳಿಂದ ರಾಷ್ಟ್ರಪತಿ ಕಾರ್ಯಾಲಯದಲ್ಲಿ ಕಾಯುತ್ತಿದ್ದ ಎಂಟು ಜನ ಕೊಲೆಗಡುಕರ ಕ್ಷಮಾದಾನದ ಅರ್ಜಿ ಜೂನ್ ೧೫ರಂದು ತೀರ್ಮಾನವಾಗಿದ್ದು ಅವರಿಗೆಲ್ಲ ಶಿಕ್ಷೆಯ ಸ್ವರೂಪವನ್ನು ಬದಲಿಸಲಾಗಿದೆ. ಎರಡು ಬೇರೆ ಬೇರೆ ಪ್ರಕರಣಗಳಲ್ಲಿ ನೇಣಿನ ಶಿಕ್ಷೆಗೆ ಗುರಿಯಾಗಿದ್ದ ಎಂಟು ಜನ ಆಪಾದಿತರು ೧೯೯೯ರಲ್ಲಿ ಕ್ಷಮಾದಾನ ಕೋರಿ ರಾಷ್ಟ್ರಪತಿಗೆ ಅರ್ಜಿ ಸಲ್ಲಿಸಿದ್ದರು. ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಲಾಗಿದೆ.

ಪ್ರತಿಭಾ ಪಾಟೀಲ್ ರಾಷ್ಟ್ರಪತಿಯಾದಾಗಿನಿಂದ ಒಟ್ಟು ಮೂರು ಕ್ಷಮಾದಾನದ ಅರ್ಜಿಗಳು ಇತ್ಯರ್ಥವಾಗಿದ್ದು ಎಲ್ಲ ಮೂರು ಪ್ರಕರಣಗಳಲ್ಲಿ ಒಟ್ಟು ೯ ಜನರ ನೇಣಿನ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸಲಾಗಿದೆ. ಇವರನ್ನು ಸುಧಾರಿಸಿ ಸಮಾಜದ ಮುಖ್ಯವಾಹಿನಿಗೆ ತರಬಹುದೆಂಬ ವಿಶ್ವಾಸದಿಂದ ಈ ಕ್ಷಮೆ ನೀಡಲಾಗಿದೆ.

—ooo—

### ನಾನಾವತಿ ಕಮಿಷನ್ನಿನ ವರದಿ ಸಲ್ಲಿಕೆ

*ಗುಜರಾತ್ ಗಲಭೆ ಪ್ರಕರಣಗಳಿಗೆ ತಾರ್ಕಿಕ ಅಂತ್ಯ?*

೨೦೦೨ರಲ್ಲಿ ಗುಜರಾತಿನಲ್ಲಿ ನಡೆದ ಗೋಧ್ರಾ ಹತ್ಯೆಗಳು ಮತ್ತು ನಂತರ ನಡೆದ ಮತೀಯ ಗಲಭೆಗಳನ್ನು ವಿಚಾರಣೆ ಮಾಡಲು ನೇಮಕಗೊಂಡಿದ್ದ ನ್ಯಾ॥ ನಾನಾವತಿ ಕಮಿಷನ್, ಗುಜರಾತ್ ಉಚ್ಚ ನ್ಯಾಯಾಲಯಕ್ಕೆ ತನ್ನ ವರದಿ ಸಲ್ಲಿಸಿದೆ.

ನ್ಯಾ॥ ನಾನಾವತಿ ಮತ್ತು ನ್ಯಾ॥ ಅಕ್ಷಯ್ ಮೆಹ್ತಾ ಸದಸ್ಯರಾಗಿರುವ ಈ ಕಮೀಷನ್ನನ್ನು ಮೊದಲು ಕೇವಲ ಸಾಬರ್ಮತಿ ಎಕ್ಸ್‌ಪ್ರೆಸ್ ರೈಲನ್ನು ಮತ್ತು ಪ್ರಯಾಣಿಕರನ್ನು ಸುಟ್ಟ ಘಟನೆಯನ್ನು ಮಾತ್ರ ವಿಚಾರಿಸಲು ನೇಮಿಸಲಾಗಿತ್ತು. ನಂತರ ಮಾರ್ಗಸೂಚಿಗಳನ್ನು ಬದಲಿಸಿ ಗೋಧ್ರಾ ನಂತರದ ಗಲಭೆಗಳನ್ನೂ ತನಿಖೆ ಮಾಡಲು ಸೂಚಿಸಲಾಗಿತ್ತು.

—ooo—

### ವಕೀಲರಿಂದ ಮುಖ್ಯ ನ್ಯಾಯಮೂರ್ತಿಯ ನ್ಯಾಯಾಲಯದಲ್ಲಿ ಗಲಭೆ

*ಒಡೆದದ್ದು ಗಾಜಲ್ಲ, ಸೌಹಾರ್ದಯುತ ಸಂಬಂಧ*

ಜೂನ್ ೨೫ರಂದು ಕೊಲ್ಕತ್ತಾ ಉಚ್ಚ ನ್ಯಾಯಾಲಯದ ಕೆಲ ವಕೀಲರು ಮುಖ್ಯ ನ್ಯಾಯಮೂರ್ತಿಗಳ ನ್ಯಾಯಾಂಗಣಕ್ಕೆ ನುಗ್ಗಿ, ಗಲಭೆ ನಡೆಸಿ, ಅಲ್ಲಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ ಗಾಜಿನ ಕಿಟಕಿಗಳನ್ನು ಒಡೆದಿದ್ದಾರೆಂದು ವರದಿಯಾಗಿದೆ. ಇದನ್ನು ನಿರಾಕರಿಸಿರುವ ವಕೀಲರು 'ಕೊಂಡಿ ಕಳಚಿ ಕಿಟಕಿಯ ಗಾಜು ಒಡೆದಿರುವುದು ನಿಜ, ಗಲಭೆಯಿಂದಲ್ಲ' ಎಂದಿದ್ದಾರೆ.

ನ್ಯಾಯಾಲಯದ ಅಂಗಳದಲ್ಲಿದ್ದ ಕೊಠಡಿಯಿಂದ ವಕೀಲರನ್ನು ತೆರವುಗೊಳಿಸಲು ಮುಂದಾಗಿರುವ ಮುಖ್ಯ ನ್ಯಾಯಮೂರ್ತಿಯ ಕ್ರಮದಿಂದ ವಕೀಲರು ಆಕ್ರೋಶಗೊಂಡಿದ್ದಾರೆ.

—ooo—

### ನ್ಯಾ॥ ಬಾಲಕೃಷ್ಣನ್ ಇನ್ನು ಮಾನವ ಹಕ್ಕುಗಳ ರಕ್ಷಕ

*ಬದಲಾದ ಕಮಿಷನ್ನಿನ ನಿಲುವು*

ಜೂನ್ ೩ರಂದು ನಿವೃತ್ತ ಮುಖ್ಯ ನ್ಯಾಯಮೂರ್ತಿ, ಕೆ.ಜಿ. ಬಾಲಕೃಷ್ಣನ್ ರಾಷ್ಟ್ರೀಯ ಮಾನವ ಹಕ್ಕುಗಳ ಕಮಿಷನ್ನಿನ ೬ನೆ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಹುದ್ದೆಯಲ್ಲಿ ಇನ್ನು ೫ ವರ್ಷಗಳವರೆಗೆ ಅವರು ಮುಂದುವರಿಯಲಿದ್ದಾರೆ.

ಅಧಿಕಾರ ಸ್ವೀಕರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೆ.ಜಿ. ಬಾಲಕೃಷ್ಣನ್, 'ಮಾವೊ ಉಗ್ರವಾದಿಗಳಿಂದ ಹತ್ಯೆಗೊಳಗಾಗುತ್ತಿರುವ ಯೋಧರ ಜೀವಗಳಿಗೂ ಬೆಲೆ ಇದೆ. ಅವರ ಸಾವೂ ಮಾನವ ಹಕ್ಕಿನ ಉಲ್ಲಂಘನೆ' ಎಂದಿದ್ದಾರೆ. ಈ ಹೇಳಿಕೆ ಕಮಿಷನ್ನಿನ ನಿಲುವಿನಲ್ಲಿ ಬದಲಾವಣೆಯನ್ನು ಸೂಚಿಸುತ್ತದೆಯೆ?

## ತಿಂಗಳ ಸುದ್ದಿ

### ದಿನಕರನ್ ಪ್ರಕರಣ: ಕಡತ ಮತ್ತೆ ಕೊಲೇಜಿಯಂನ ಅಂಗಳಕ್ಕೆ

ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಪಿ.ಡಿ. ದಿನಕರನ್ ಸೇರಿದಂತೆ ಹಲವು ಮುಖ್ಯ ನ್ಯಾಯಮೂರ್ತಿಗಳ ವರ್ಗಾವಣೆ ಮತ್ತೆ ಸರ್ವೋಚ್ಚ ನ್ಯಾಯಾಲಯದ ಕೊಲೇಜಿಯಂನ ಅಂಗಳಕ್ಕೆ ಬಂದು ಬಿದ್ದಿದೆ.

ಈ ಹಿಂದೆ ಕೊಲೇಜಿಯಂ ಹಲವು ಮುಖ್ಯ ನ್ಯಾಯಮೂರ್ತಿಗಳನ್ನು ವರ್ಗಾವಣೆಗೆ ಶಿಫಾರಸು ಮಾಡಿ ಕಡತವನ್ನು ಪ್ರಧಾನ ಮಂತ್ರಿಯ ಕಾರ್ಯಾಲಯಕ್ಕೆ ಕಳಿಸಿತ್ತು. ಆ ಪ್ರಕಾರ ನ್ಯಾ॥ ಪಿ.ಡಿ. ದಿನಕರನ್ ಕರ್ನಾಟಕದಿಂದ ಸಿಕ್ಕಿಂಗೆ ವರ್ಗಾವಣೆಗೊಳ್ಳಬೇಕಿತ್ತು. ಆದರೆ ಪ್ರಧಾನಿ ಕಾರ್ಯಾಲಯದ ಆದೇಶದಿಂದ ಈ ವರ್ಗಾವಣೆ ನೆನೆಗುದಿಗೆ ಬಿದ್ದಿದೆ.

ಮುಖ್ಯ ನ್ಯಾಯಮೂರ್ತಿಯನ್ನು ಕ್ಷಿಪ್ರ ಅವಧಿಯಲ್ಲಿ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ವರ್ಗಾಯಿಸುವುದರಿಂದ ರಾಜ್ಯದ ನ್ಯಾಯಾಂಗದ ಆಡಳಿತದ ಮೇಲೆ ದುಷ್ಪರಿಣಾಮ ಬೀರುತ್ತದೆಂಬುದು ಪ್ರಧಾನಿ ಕಾರ್ಯಾಲಯದ ಆದೇಶಕ್ಕೆ ಕಾರಣ.

ಈಗಿನ ವ್ಯವಸ್ಥೆಯಂತೆ ಕೊಲೇಜಿಯಂ ಮರುಪರಿಶೀಲನೆ ನಂತರ ತನ್ನ ನಿರ್ಧಾರವನ್ನು ಬದಲಿಸಿ ಅಥವಾ ಬದಲಿಸದೆ ಕಡತವನ್ನು ಪ್ರಧಾನಿ ಕಾರ್ಯಾಲಯಕ್ಕೆ ಕಳಿಸಬಹುದು. ಸರಕಾರ ಅಂಥ ತೀರ್ಮಾನಕ್ಕೆ ಬದ್ಧವಾಗಿರಬೇಕಾಗುತ್ತದೆ.

ಜುಲೈ ೫ರಂದು ಸರ್ವೋಚ್ಚ ನ್ಯಾಯಾಲಯ ಬೇಸಿಗೆ ರಜಾ ಕಾಲದ ನಂತರ ಪುನರಾರಂಭಗೊಳ್ಳುವವರೆಗಂತೂ ಈ ವರ್ಗಾವಣೆಯ ಆದೇಶಗಳು ಸ್ಥಗಿತಗೊಂಡಂತಾಗಿದೆ.

### 'ನ್ಯಾಯಾಧೀಶರ ನೇಮಕಾತಿ ಪುನರ್ಪರಿಶೀಲನೆ' : ಮೊಯಿಲಿ

ಸುಪ್ರೀಂ ಕೋರ್ಟ್ ತೀರ್ಮಾನಿಸಿರುವ ನ್ಯಾಯಾಧೀಶರ ಕೇಸ್ -I ಮತ್ತು ನ್ಯಾಯಾಧೀಶರ ಕೇಸ್–II ರಂತೆ ಈಗ ಜಾರಿಯಲ್ಲಿರುವ ಕೊಲೇಜಿಯಂ ನ್ಯಾಯಾಧೀಶರನ್ನು ನೇಮಕಮಾಡುವ ವಿಧಾನವನ್ನು ಪುನರ್ಪರಿಶೀಲನೆಗೆ ಒಳಪಡಿಸಲಾಗುವುದೆಂದು ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯಿಲಿ ಹೇಳಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ಆಯ್ದ ಹಿರಿಯ ನ್ಯಾಯಮೂರ್ತಿಗಳು, ಉಚ್ಚ ನ್ಯಾಯಾಲಯಗಳಿಗೆ ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ನ್ಯಾಯಮೂರ್ತಿಗಳನ್ನು ಆರಿಸಿ ನೇಮಿಸುವ ಈ ಕ್ರಮ ತೃಪ್ತಿಕರವಾಗಿಲ್ಲವೆಂದಿರುವ ಮೊಯಿಲಿ, ಈ ವಿಧಾನದಲ್ಲಿ ಬದಲಾವಣೆಗಳನ್ನು ತರಲು ಚಿಂತನೆ ನಡೆದಿದೆ ಎಂದಿದ್ದಾರೆ.

'ಈಗಿರುವ ಕೊಲೇಜಿಯಂ ಪದ್ಧತಿ ಎರಡೂ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದಂತೆ ಇಲ್ಲ' ಎಂದು ಪಿಟಿಆಯ್‌ಗೆ ಕೊಟ್ಟಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ವಿಶ್ವದಾದ್ಯಂತದ ಹೆಚ್ಚಿನ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ ಸರಕಾರವೆ ನ್ಯಾಯಮೂರ್ತಿಗಳನ್ನು ಆರಿಸಿ ನೇಮಿಸುತ್ತದೆ. ಕೇವಲ ಭಾರತದಲ್ಲಿ ಮಾತ್ರ ನ್ಯಾಯಧೀಶರು ನ್ಯಾಯಾಧೀಶರನ್ನು ಆರಿಸುತ್ತಾರೆ. ೧೯೯೩ರ ಮೊದಲು ಸರಕಾರ ನ್ಯಾಯಮೂರ್ತಿಗಳನ್ನು ಆರಿಸುವ ಕ್ರಮವೂ ತೃಪ್ತಿದಾಯಕವಾಗಿರಲಿಲ್ಲ. ಇಂದಿರಾಗಾಂಧಿ, ನ್ಯಾಯಾಧೀಶರು ತಮ್ಮ ಸರಕಾರದ ಸಿದ್ಧಾಂತಗಳನ್ನು ಒಪ್ಪುವಂತಹವರಾಗಿರಬೇಕೆಂದು ಬಹಿರಂಗವಾಗಿ ಕರೆ ಕೊಟ್ಟಿದ್ದರು.

**–: ಸೂಚನೆ :–**

- ಲಹರಿ ವಕೀಲರ ವೇದಿಕೆಯ ಆಜೀವ ಸದಸ್ಯತ್ವ ಶುಲ್ಕವನ್ನು ಹಾಲಿ ರೂ. ೫೦೦/– ರಿಂದ ರೂ. ೧೦೦೦/–ಕ್ಕೆ ಹೆಚ್ಚಿಸಲಾಗಿದೆ. ಮಾನ್ಯ ಸದಸ್ಯರಲ್ಲಿ ಉಳಿಕೆ ಹಣವನ್ನು ಶೀಘ್ರವಾಗಿ ಪಾವತಿಸಲು ಕೋರಲಾಗಿದೆ.
- ವಾರ್ಷಿಕ ಸದಸ್ಯತ್ವ ಶುಲ್ಕವನ್ನು ರೂ. ೫೦/–ಕ್ಕೆ ಹೆಚ್ಚಿಸಲಾಗಿದೆ.
- ಕಮ್ಯುನಿಕ್ ಮತ್ತು ಸಂವಾದ ಪತ್ರಿಕೆಗಳ ವಾರ್ಷಿಕ ಚಂದಾ ದರ ರೂ. ೪೦/–ಕ್ಕೆ ಹೆಚ್ಚಿಸಲಾಗಿದೆ ಮತ್ತು ಅಂಚೆ ಬಟವಾಟೆಗೆ ಚಂದಾ ಹಣವನ್ನು ರೂ. ೧೦೦/–ಕ್ಕೆ ನಿಗದಿಗೊಳಿಸಲಾಗಿದೆ.

# ಭೋಪಾಲ್ ಗ್ಯಾಸ್ ಪ್ರಕರಣ : ನಮ್ಮ ವ್ಯವಸ್ಥೆ ಎಡವಿದ್ದೆಲ್ಲಿ?

ಸುಮಾರು ೨೫ ವರ್ಷಗಳ ಹಿಂದೆ ನಡೆದ ಘೋರ ದುರಂತ. ಜಗತ್ತು ಕಂಡ ಅತ್ಯಂತ ಕರಾಳ ಔದ್ಯೋಗಿಕ ಅವಘಡ. ಕಾರ್ಖಾನೆಯೊಂದರಲ್ಲಿ ಸಂಗ್ರಹಿಸಿಟ್ಟಿದ್ದ ವಿಷಾನಿಲ ಸೋರಿ ಒಂದೇ ರಾತ್ರಿಯಲ್ಲಿ ಸುಮಾರು ೧೫,೦೦೦ ಜನ 'ಅಧಿಕೃತ'ವಾಗಿ ಸತ್ತರು. ನಂತರ ಹಲವಾರು ವರ್ಷಗಳವರೆಗೆ ವಿಷ ಅನಿಲದಿಂದ ಸಾವುಗಳು ಸಂಭವಿಸುತ್ತಲೇ ಇದ್ದವು. ದಾಖಲಾದವೆಷ್ಟೋ, ದಾಖಲಾಗದೇ ಹೋದವೆಷ್ಟೋ? ಈ ಘಟನೆಯ ಕ್ರಿಮಿನಲ್ ಹೊಣೆಗಾರಿಕೆಯ ಕುರಿತಾದ ಪ್ರಕರಣದ ತೀರ್ಪನ್ನು ಈ ಜೂನ್ ತಿಂಗಳ ೭ ರಂದು ಪ್ರಥಮ ಹಂತದ ನ್ಯಾಯಾಲಯ ಪ್ರಕಟಿಸಿದೆ. ತೀರ್ಪೇನು ಗೊತ್ತೆ? ಎಂಟು ಜನ ಅಪಾದಿತರಿಗೆ ತಲಾ ಎರಡು ವರ್ಷಗಳ ಜೈಲು ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಗಳ ದಂಡ! ಇದು ಭೂಪಾಲ್ ಗ್ಯಾಸ್ ದುರಂತ ಪ್ರಕರಣದ ವಿಚಾರಣೆಯ ದುರಂತ ಚಿತ್ರಣ.

'ನಮ್ಮ ವ್ಯವಸ್ಥೆಯಲ್ಲಿ ಸಾಧ್ಯವಿರುವುದು ಇಷ್ಟೆ' ಎಂದು ಕೆಲವರು ಸಮಾಧಾನ ಪಟ್ಟುಕೊಂಡರೆ ಇನ್ನು ಕೆಲವರು ಈ ತೀರ್ಪಿನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಪ್ರಚಲಿತ**

ಇಂಥ ತೀರ್ಪಿಗೆ ಕಾರಣ ೧೯೯೬ರಲ್ಲಿ ಸರ್ವೋಚ್ಛ ನ್ಯಾಯಾಲಯದ 'ಆಪಾದಿತರನ್ನು ಭಾರತೀಯ ದಂಡ ಸಂಹಿತೆ ಸೆ. ೩೦೪ ರಡಿ ಶಿಕ್ಷಿಸಲಾಗದು.

- Bhopal Gas leak Disaster (processing of claims) Act 1985ರಡಿ ದಾವೆ
- ಅಪಕೃತ್ಯ (Tort)ಕ್ಕಾಗಿ ಪರಿಹಾರ ಕೇಳಿರುವ ದಾವೆಯಲ್ಲಿ ಸಿವಿಲ್ ನ್ಯಾಯಾಲಯಗಳಿಗೆ ಶಾಸನಗಳಲ್ಲಿ ಅಲ್ಲ ಬದಲಾಗಿ ಕಾಮನ್ ಲಾ ಪ್ರಕಾರ ಮಧ್ಯಂತರ ಪರಿಹಾರಕ್ಕೆ ಆಜ್ಞೆ ಮಾಡಲು ಅಧಿಕಾರವಿದೆ.
- ಸೆ. ೯ ಮತ್ತು ೯೪(ಇ) ಸಿ.ಪಿ.ಸಿ. ಯಂತೆ ಅಧಿಕಾರವಿಲ್ಲ.
- ಯುನಿಯನ್ ಕಾರ್ಬಾಯ್ಡ್ (ಇಂಡಿಯಾ) ಲಿಮಿಟೆಡ್ ಅಮೇರಿಕಾದ ಯುನಿಯನ್ ಕಾರ್ಬಾಯ್ಡ್ ಕಾರ್ಪೋರೇಷನ್ನಿನ ಪೂರಕ ಸಂಸ್ಥೆ.
- ವಿವಾದ ರಾಜಿಯಲ್ಲಿ ಅಂತ್ಯ
- ಸಿವಿಲ್ ಹೊಣೆಗಾರಿಕೆ ವಿಷಯಕ್ಕೆ ಸಂಬಂಧಿಸಿದಂತೆ ಯುನಿಯನ್ ಕಾರ್ಬಾಯ್ಡ್ ಕಾರ್ಪೋರೇಷನ್ನಿನ Vicarious liability ತೀರ್ಮಾನವಾಗಲೆ ಇಲ್ಲ.
- ೧೯೮೯(೨)ಎಸ್‌ಸಿಸಿ ೫೪೦

ವಿಚಾರಣೆ ನಡೆಯ ಬೇಕಾಗಿರುವುದು ಕೇವಲ ಸೆ. ೩೦೪ಎ ಆಪಾದನೆಗಳ ಬಗ್ಗೆ' ಎಂದಿರುವ ತೀರ್ಮಾನ. ಹೀಗಾಗಿ ಆಪಾದಿತರ ಹಣೆಬರಹ ೧೯೯೬ರಲ್ಲೆ ತೀರ್ಮಾನವಾಗಿತ್ತು.

ಈಗ ಈ ತೀರ್ಮಾನದ ಒಂದೂವರೆ ದಶಕಗಳ ನಂತರ ಭಾರತ ಸರಕಾರ ಈ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದಲ್ಲಿ ಕ್ಯುರೇಟಿವ್ ಪಿಟಿಷನ್ ದಾಖಲಿಸುವತ್ತ ಚಿಂತನೆ ಹರಿಬಿಟ್ಟಿದೆ. ಕ್ಯುರೇಟಿವ್ ಪಿಟಿಷನ್ ಸರಕಾರದಂತೆ ತೀರ್ಮಾನವಾದರೂ, ಈ ಕೆಳಗಿನ ಅಂಶಗಳನ್ನು ಗಮನಿಸಿ

- ಆಪಾದಿತ ಕೆಶುಬ್ ಮಹೀಂದ್ರಗೆ ೮೦ಕ್ಕಿಂತ ಹೆಚ್ಚು ವರ್ಷ ವಯಸ್ಸು.
- ಉಳಿದ ಆಪಾದಿತರೆಲ್ಲ 'ಹಿರಿಯ ನಾಗರೀಕ'ರೆ
- ಈ ಕ್ಯುರೇಟಿವ್ ಪಿಟಿಷನ್ ತೀರ್ಮಾನವಾಗಿ, ಆ ಪ್ರಕಾರ ಮ್ಯಾಜಿಸ್ಟ್ರೇಟರ ಮುಂದೆ ಆಪಾದಿತರನ್ನು ವಿಚಾರಣೆಗೊಳಪಡಿಸಿ, ತೀರ್ಪು ಬಂದು, ಆ ತೀರ್ಪು ಸೆಷನ್ಸ್ ನ್ಯಾಯಾಲಯ, ಉಚ್ಛ ನ್ಯಾಯಾಲಯಗಳ ಅಂಗಳದಲ್ಲಿ ಹರಿದಾಡಿ, ಅಂತಿಮವಾಗಿ ಸರ್ವೋಚ್ಛ ನ್ಯಾಯಾಲಯದಿಂದ ಶಿಕ್ಷೆ ಕಾಯಂಗೊಳ್ಳುವುದಾದರೂ ಅದು ಎಷ್ಟು ವರ್ಷಗಳ ನಂತರ?
- ಅಲ್ಲಿಯವರೆಗೆ ಈ 'ಹಿರಿಯ ನಾಗರಿಕ'ರಿಗೆಲ್ಲ ಮತ್ತು ನನಗೂ, ನಿಮಗೂ ಎಷ್ಟು ವರ್ಷ ವಯಸ್ಸಾಗಿರುತ್ತದೆ?

ಇದು ಕ್ರಿಮಿನಲ್ ಕೇಸಿನ ಕಥೆಯಾಯಿತು. ಕಾರ್ಖಾನೆಯ ಆಡಳಿತ ಮಂಡಳಿಯ ಸಿವಿಲ್ ಹೊಣೆಗಾರಿಕೆಯೇನು? ತಪ್ಪಿತಸ್ಥರಿಂದ ಪರಹಾರ ವಸೂಲು ಮಾಡುವ ಮತ್ತು ನೊಂದವರಿಗೆ, ಸತ್ತವರ ವಾರಸುದಾರರಿಗೆ ಪರಿಹಾರ ವಿತರಿಸುವ ಹೊಣೆಗಾರಿಕೆಯನ್ನಾದರೂ ನಮ್ಮ ನ್ಯಾಯಿಕ ವ್ಯವಸ್ಥೆ ಸರಿಯಾಗಿ ನಿರ್ವಹಿಸಿತೆ? ಸಾಕಷ್ಟು ಮೊತ್ತದ ಪರಿಹಾರವನ್ನು ಸರಿಯಾದ ಸಮಯದಲ್ಲಿ ಕೊಡಮಾಡಲ್ಪಟ್ಟೀತೆ?

**ಉತ್ತರ ಹೀಗಿದೆ :**

ಅಮೇರಿಕಾದ ಯುನಿಯನ್ ಕಾರ್ಬಾಯ್ಡ್ ಕಾರ್ಪೋರೇಷನ್ನಿನ ಭಾರತೀಯ ಪೂರಕ ಸಂಸ್ಥೆ (subsidiary company) ಯುನಿಯನ್ ಕಾರ್ಬಾಯ್ಡ್ ಇಂಡಿಯಾ ಲಿಮಿಟೆಡ್. ಭೋಪಾಲಿನ ಕಾರ್ಖಾನೆ ಭಾರತೀಯ ಕಂಪನಿಗೆ ಸೇರಿದ್ದು.

ದುರಂತ ನಡೆದ ವರ್ಷವೆ ಭಾರತ ಸರಕಾರ Bhopal Gas Leak Disaster (Processing of claims) Act, 1985 ಎಂಬ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯಂತೆ ಭೂಪಾಲ್ ಅನಿಲ ಸಂತ್ರಸ್ತರನ್ನು ಸಿವಿಲ್ ಪರಿಹಾರಕ್ಕಾಗಿ ಯುನಿಯನ್ ಕಾರ್ಬೈಡ್ ಕಂಪನಿಯ ವಿರುದ್ಧ ತಾನೇ ಪ್ರತಿನಿಧಿಸಲು ಸರಕಾರ ಅಧಿಕಾರ ಪಡೆದು ಕೊಂಡಿತು.

ಹೀಗೆ ಅಧಿಕಾರ ಪಡೆದುಕೊಂಡ ಸರಕಾರ ಭೋಪಾಲಿನ ವಿಶೇಷ ನ್ಯಾಯಾಲಯವೊಂದರ ಎದುರು ಪರಿಹಾರಕ್ಕಾಗಿ ದಾವಾ ಹೂಡಿತು, ಸಂತ್ರಸ್ತರ ಪರವಾಗಿ. ಪ್ರಕರಣದ ಸಾಕ್ಷಿ ವಿಚಾರಣೆ ಪ್ರಾರಂಭವಾಗುವ ಮೊದಲೆ ವಿಶೇಷ ನ್ಯಾಯಾಧೀಶರು ಸಿ.ಪಿ.ಸಿ.ಯ ಸೆ. ೯೪(ಇ) ಮತ್ತು ೧೫೧ರಂತೆ ತನಗಿರುವ ಅಧಿಕಾರವನ್ನು ಚಲಾಯಿಸಿ interim componsation ಎಂದು ೩೫೦ ಕೋಟಿ ರೂಪಾಯಿಗಳನ್ನು ನ್ಯಾಯಾಲಯದಲ್ಲಿ ಇಡುವಂತೆ ಆಜ್ಞೆ ಮಾಡಿತು.

ನಂತರದ ಹಂತ ಜಬಲ್‌ಪುರ್ ಬೆಂಚಿನ ಮಧ್ಯ ಪ್ರದೇಶದ ಉಚ್ಛ ನ್ಯಾಯಾಲಯದಲ್ಲಿ. ಇಲ್ಲಿ ವಿಶೇಷ ನ್ಯಾಯಾಲಯದ ಆಜ್ಞೆಯನ್ನು ಪ್ರಶ್ನಿಸಲಾಯಿತು. ಉಚ್ಛ ನ್ಯಾಯಾಲಯದಲ್ಲಿ ಅಮೇರಿಕಾದ ಕಂಪನಿ ತನಗೆ ಭಾರತೀಯ ಕಂಪನಿಯ ಹೊಣೆಗಾರಿಕೆಯನ್ನು ತೀರಿಸುವ Vicarious Liability ಇಲ್ಲವೆಂದಿತು. ಉಚ್ಛ ನ್ಯಾಯಾಲಯ, ಕೆಳ ನ್ಯಾಯಾಲಯಕ್ಕೆ ಸಿ.ಪಿ.ಸಿ. ಸೆ. ೯೪(ಇ) ಮತ್ತು ೧೫೧ರಂತೆ ಇಂಥ ಆಜ್ಞೆ ಮಾಡಲು ಅಂತರ್ನಿಹಿತ ಅಧಿಕಾರ (inherent power) ಇದೆ ಎಂದು ಒಪ್ಪಲಿಲ್ಲ. ಆದರೆ ನ್ಯಾಯಾಲಯ ಕಾಮನ್ ಲಾ ಅಡಿಯಲ್ಲಿ ಇಂಥ ಆಜ್ಞೆ ಮಾಡಲು ಅಧಿಕಾರವಿದೆ ಎಂದು ಕಂಡುಕೊಂಡು ೨೫೦ ಕೋಟಿ ರೂಪಾಯಿಗಳನ್ನು ನ್ಯಾಯಾಲಯದಲ್ಲಿ ಠೇವಣಿಯಾಗಿಡುವಂತೆ ಪ್ರತಿವಾದಿಗೆ ನಿರ್ದೇಶಿಸಿತು (ಸೂಚನೆ: ಭಾರತೀಯ ನ್ಯಾಯಾಲಯಗಳಿಗೆ ಟಾರ್ಟ್(Tort) ಸಂಬಂಧಿ ವಿಷಯಗಳಲ್ಲಿ ಮಧ್ಯಕಾಲೀನ ಪರಿಹಾರ (interin componsation) ಕೊಡಲು ಕಾಮನ್ ಲಾ ಪ್ರಕಾರ ಇರುವ ಅಧಿಕಾರವನ್ನು ಗುರುತಿಸಿರುವ ಈ ತೀರ್ಪು ಭಾರತೀಯ ನ್ಯಾಯಾಂಗದ ಇತಿಹಾಸದಲ್ಲೆ ಮೊಟ್ಟ ಮೊದಲನೆಯದು).

ಮುಂದಿನ ಹಂತ ಸರ್ವೋಚ್ಛ ನ್ಯಾಯಾಲಯ. ಮಧ್ಯಕಾಲೀನ ಪರಿಹಾರದ ವಿಷಯ ಸರ್ವೋಚ್ಛ ನ್ಯಾಯಾಲಯಕ್ಕೆ ಬಂದಾಗ ನ್ಯಾಯಾಲಯ. ವಾದಿ-ಪ್ರತಿವಾದಿಗಳನ್ನು ರಾಜಿ ಮಾಡಿಕೊಳ್ಳಲು ಒತ್ತಾಯಿಸಿತು. ಆ ಪ್ರಕಾರ ಫೆಬ್ರುವರಿ ೧೯೮೯ರಲ್ಲಿ ವಾದಿ-ಭಾರತ ಸರಕಾರ ಮತ್ತು ಪ್ರತಿವಾದಿ ಯುನಿಯನ್ ಕಾರ್ಬಾಯ್ಡ್ ಕಾರ್ಪೋರೇಷನ್ ರಾಜಿ ಮಾಡಿಕೊಂಡು ರೂಪಾಯಿ ಮೂರು ಸಾವಿರ ಕೋಟಿಗಳನ್ನು ಪೂರ್ತಿ ಮತ್ತು ಅಂತಿಮ ಪರಿಹಾರವೆಂದು (full and final settlement) ತೀರ್ಮಾನಿಸಲಾಯಿತು. (ನೋಡಿ: ೧೯೮೯(೨) ಎಸ್ ಸಿಸಿ ೫೪೦) ಆ ಪ್ರಕಾರ ಕಂಪನಿ ಹಣ ಸಂದಾಯ ಮಾಡಿತು.

ಸಂತ್ರಸ್ತರ ಪ್ರತಿನಿಧಿಗಳೆಂದು ಹೇಳಿಕೊಂಡು ಕೆಲ ಸ್ವಯಂ ಸೇವಾ ಸಂಘ ಸಂಸ್ಥೆಗಳು ಈ ರಾಜಿಯನ್ನು ಪ್ರಶ್ನಿಸಿ ಸರ್ವೋಚ್ಛ ನ್ಯಾಯಾಲಯದಲ್ಲಿ ರಿವ್ಯು ಅರ್ಜಿ ಸಲ್ಲಿಸಿದವು. ಈ ಅರ್ಜಿ ತೀರ್ಮಾನವಾಗುವವರೆಗೆ ಪರಿಹಾರ ವಿತರಿಸಬಾರದೆಂದು ನ್ಯಾಯಾಲಯ ಹೇಳಿತು.

ಈ ಅರ್ಜಿ ಅಂತಿಮವಾಗಿ ಡಿಸೆಂಬರ್ ೩, ೧೯೯೧ ರಂದು. ವಜಾ ಆಯಿತಾದರೂ. ಅಷ್ಟರಲ್ಲಿ ದುರಂತ ನಡೆದು ೬ ವರ್ಷಗಳು ಕಳೆದಿದ್ದವು. ಅಲ್ಲಿಯವರೆಗೂ ಸಂತ್ರಸ್ತರಿಗೆ, ಸತ್ತವರ ವಾರಸುದಾರರಿಗೆ ಒಂದು ಚಿಕ್ಕಾಸೂ ಪರಿಹಾರವಾಗಿ ಸಿಕ್ಕಿರಲಿಲ್ಲ. ಒಂದೆಡೆ ಸಂತ್ರಸ್ತರನ್ನು ಪ್ರತಿನಿಧಿಸುವ ಸರಕಾರ, ಇನ್ನೊಂದೆಡೆ ಸಂತ್ರಸ್ತರ ಹಿತಾಸಕ್ತಿ ಕಾಯಲು ತಮ್ಮನ್ನು ತಾವೆ ನೇಮಿಸಕೊಂಡ ಸ್ವಯಂ ಸೇವಾ ಸಂಘಟನೆಗಳು, ಮತ್ತೊಂದೆಡೆ ತನಗೆ ಪರಿಹಾರ ಕೊಡಲು ಸಿವಿಲ್ ಹೊಣೆಗಾರಿಕೆ (liability) ಇಲ್ಲವೆಂದು ವಾದಿಸುತ್ತಿರುವ ಕಂಪನಿ. ಇದೆಲ್ಲದಕ್ಕೆ ಕಳಶವಿಟ್ಟಂತೆ, ಆಮೆಗತಿಯಲ್ಲಿ ಚಲಿಸುವ ನ್ಯಾಯಿಕ ಪ್ರಕ್ರಿಯೆಗಳು. ಸಂತ್ರಸ್ತರ ಹೈರಾಣಾಗಿ ಹೋಗಿದ್ದರು.

ಇಷ್ಟೆಲ್ಲ ಆದರೂ ಪರಿಹಾರ ಹಂಚುವ ಕಾರ್ಯವಿರಲಿ, ಸಂತ್ರಸ್ತರನ್ನು ಗುರುತಿಸುವ, ಅವರವರ ಪಾಲು ತೀರ್ಮಾನ ಮಾಡುವ ಕೆಲಸವೇ ನಡೆದಿರಲಿಲ್ಲ. ಅಷ್ಟರಲ್ಲಿ ಗ್ಯಾಸ್ ದುರಂತದಲ್ಲಿ ಬದುಕುಳಿದ ಎಷ್ಟೋ ಜನ ಕಾಲನ ಹೊಡೆತಕ್ಕೆ ಸಿಕ್ಕಿ ಸತ್ತು ಹೋಗಿದ್ದರು. ವಾರಸುದಾರರ ವಾರಸುದಾರರು ರಂಗಕ್ಕೆ ಬಂದಿದ್ದರು!

ಅಂತಿಮವಾಗಿ ೧೯ ಜುಲೈ ೨೦೦೪ರಂದು ಸರ್ವೋಚ್ಛ ನ್ಯಾಯಾಲಯದ ನ್ಯಾ॥ ಶಿವರಾಜ್ ಪಾಟೀಲ್ ಮತ್ತು ನ್ಯಾ॥ ಬಿ.ಎಸ್. ಶ್ರೀಕೃಷ್ಣರ ಪೀಠ ಪರಿಹಾರ ವಿತರಿಸಲು ಸರಕಾರಕ್ಕೆ ನಿರ್ದೇಶನ ಕೊಟ್ಟಿತು. ಆ ಪ್ರಕಾರ ಪರಿಹಾರ ಹಂಚುವ ಕಾರ್ಯ ಇನ್ನೂ ಕುಂಟುತ್ತ ಸಾಗಿದೆ. •

# ಲೋಕಾಯುಕ್ತಕ್ಕೆ ಹೆಚ್ಚಿನ ಬಲ; ಸರ್ಕಾರ


ಲೋಕಾಯುಕ್ತ, ನ್ಯಾ. ಸಂತೋಷ ಹೆಗಡೆ ಜೂ. ೨೫ರ ಸಂಜೆ, ಆಗಸ್ಟ್ ೩೧ರಿಂದ ಜಾರಿಗೆ ಬರುವಂತೆ ತಮ್ಮ ಹುದ್ದೆಗೆ ರಾಜಿನಾಮೆ ಸಲ್ಲಿಸಿದ್ದರಿಂದ ಮುಜುಗರಕ್ಕೊಳಗಾದ ಸರ್ಕಾರ ಲೋಕಾಯುಕ್ತ ಸಂಸ್ಥೆಯನ್ನು ಬಲಗೊಳಿಸುವುದಾಗಿ ಹೇಳಿದೆ.

ಲೋಕಾಯುಕ್ತ ಪೊಲೀಸರಿಗೆ ವಿಶೇಷ ಭತ್ಯೆ ಕೊಡದಿರುವುದು, ಲೋಕಾಯುಕ್ತ ಪ್ರಕರಣಗಳಲ್ಲಿ ಭಾಗಿಯಾದ ಅಪರಾಧಿ ಅಧಿಕಾರಿಗಳನ್ನು ಮರುನೇಮಕ ಮಾಡದಿರುವುದೂ ಸೇರಿದಂತೆ ಲೋಕಾಯುಕ್ತರ ಹಲವು ಬೇಡಿಕೆಗಳನ್ನು ಈಡೇರಿಸದ ಸರಕಾರದ ಕಾರ್ಯವೈಖರಿಯಿಂದ ಬೇಸತ್ತು ಹೆಗಡೆ ರಾಜೀನಾಮೆ ಸಲ್ಲಿಸಿದ್ದರು. ಈಗ ರಾಜಿನಾಮೆಯನ್ನು ಹಿಂಪಡೆಯಲಾಗಿದೆ.

ಕಮ್ಯುನಿಕ್ ಮತ್ತು ಸಂವಾದಕ್ಕೆ ಚಂದಾ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ:
ಶ್ರೀ ಎಸ್. ಗೋಪಾಲ್, ೯೪೪೮೮ ೬೪೮೨೩
ಶ್ರೀ ಅಶೋಕ್ ಕುಮಾರ್, ೯೮೪೫೩ ೬೯೧೩೦

## ಸಾಂಸ್ಕೃತಿಕ ಆಯಾಮ

## ಪುಸ್ತಕ ಬಿಡುಗಡೆ



೦೯.೦೬.೨೦೧೦ರಂದು ವಕೀಲ–ಕವಿ ಸಿ. ಪ್ರಕಾಶ್‌ರ ಪುಸ್ತಕ 'ಹಿತಬಿಂದು' ಬೆಂಗಳೂರಿನಲ್ಲಿ ಬಿಡುಗಡೆಯಾಯಿತು. ಅಂದು ವಕೀಲರ ಭವನದಲ್ಲಿ ಬೆಂ. ವಕೀಲರ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ ನ್ಯಾ॥ ಅರಳಿ ನಾಗರಾಜ್ 'ಹಿತಬಿಂದು' ವನ್ನು ಅನಾವರಣ ಗೊಳಿಸಿದರು.

ಸಿ. ಪ್ರಕಾಶರ ೯ನೆ ಕೃತಿ, ಹಿತಬಿಂದು ಬದುಕಿನ ಅನುಭವಗಳನ್ನು ಶಬ್ದಗಳಲ್ಲಿ ಹಿಡಿದು ತೋರಿಸಲು ಮಾಡಿದ ಪ್ರಯತ್ನ. ತ್ರಿಪದಿಗಳ ರೂಪದಲ್ಲಿ ಈ ಬಾರಿ ಪ್ರಕಾಶ್ ಅಭಿವ್ಯಕ್ತಿಸಿದ್ದಾರೆ.

ಸಮಾರಂಭದಲ್ಲಿ ವಕೀಲ, ಹಾಸ್ಯ ಬರಹಗಾರ ಹಾ.ರಾ. ಪುಸ್ತಕ ಪರಿಚಯ ಮಾಡಿಕೊಟ್ಟರು. ಪದ್ಯದ ಗಾತ್ರ ಕಿರಿದಾದರೂ ಗುಣಮಟ್ಟದ ವಿಷಯದಲ್ಲಿ ಕವಿ ರಾಜಿ ಮಾಡಿಕೊಂಡಿಲ್ಲವೆಂದರು ಹಾ.ರಾ.

ಕೃತಿಕರ್ತ ಸಿ. ಪ್ರಕಾಶ್, 'ಹಿಂದೆಲ್ಲ ಕಬ್ಬಿಣದ ಕಡಲೆಯಂತಹ ಭಾಷೆಯಿಂದಾಗಿ ಕಾವ್ಯ ನಮ್ಮನ್ನು ತಟ್ಟುತ್ತಿಲ್ಲ ಎಂದು ವಕೀಲರು ದೂರಿದ್ದರಿಂದ ಈ ಸಾರಿ ತ್ರಿಪದಿಯನ್ನು ಮಾಧ್ಯಮವಾಗಿ ಆರಿಸಿಕೊಂಡೆ' ಎಂದರು.

ooooo

೨೫.೦೬.೨೦೧೦ರಂದು ವಕೀಲ, ಸಂವಾದದ ಬಳಗದ ಬರಹಗಾರ, ಸೂತ್ರಧಾರ ರಾಮಯ್ಯನವರ 'ನಗೆ ಮಾತಿನ ಮಳೆ ಹರಿವರ್ಷದ ಹೊಳೆ' ಬಿಡುಗಡೆಯಾಯಿತು.

ಲಹರಿ ವಕೀಲರ ವೇದಿಕೆ ಮತ್ತು ಬೆಂಗಳೂರು ವಕೀಲರ ಸಾಹಿತ್ಯ ಕೂಟ ಆಯೋಜಿಸಿದ್ದ ಸಮಾರಂಭದಲ್ಲಿ ಸಾಹಿತ್ಯಕೂಟದ ಅಧ್ಯಕ್ಷ, ರಮೇಶ್ ಬಾಬು ಪುಸ್ತಕ ಬಿಡುಗಡೆ ಮಾಡಿದರು.

ಪುಸ್ತಕ ಪರಿಚಯ ಮಾಡಿದ ಹವ್ಯಾಸಿ ಬರಹಗಾರ ನಾರಾಯಣ ರಾಯಚೂರ್, ಸೂತ್ರಧಾರ ರಾಮಯ್ಯನವರೊಂದಿಗಿನ ತಮ್ಮ ಹಳೆ ಒಡನಾಟ ನೆನೆಸಿಕೊಂಡು 'Pun ರಾಮಯ್ಯನವರ ಮಾತು ಮಾತಿನಲ್ಲೂ ಇಣುಕುತ್ತಿರುತ್ತದೆ. ಲೇಖಕರು ತಾವು ಆಡಿದ ಮಾತನ್ನೆ ಬರಹವಾಗಿಸಿದ್ದರಿಂದ ಹಾಸ್ಯ ಸಹಜವಾಗಿ ಬಂದಿದೆ' ಎಂದರು.



ಕೃತಿ–ಕರ್ತ ಸೂತ್ರಧಾರ ರಾಮಯ್ಯ ಮಾತನಾಡಿ ತಮಗೆ 'ಪನ್ಮಾತು' ಆಡುವ ಗೀಳು ಎಲ್ಲಿಂದ ಅಂಟಿ ಕೊಂಡಿತು ಎಂಬುದನ್ನು ನೆನೆಸಿಕೊಂಡರು. ತಮ್ಮ ಹಳ್ಳಿ ಜನಗಳ ಮಾತು, ಬೆಂಗಳೂರಿನ ಸ್ನೇಹಿತರ ಒಡನಾಟ ದಿಂದ ತಾವು ಹೇಗೆ ಪನ್‌ಡಿತರಾದೆವೆಂಬುದನ್ನು ವಿವರಿಸಿದರು.

ooooo

೨೭.೦೬.೨೦೧೦ರಂದು ಬೆಂಗಳೂರಿನ ಬಿ.ಪಿ ವಾಡಿಯಾ ರಸ್ತೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ವಕೀಲ, ಹಾಸ್ಯ ಬರಹಗಾರ, ಎಚ್.ಆರ್. ಶಂಕರನಾರಾಯಣ ಅವರ 'ವಕೀಲಿ ದಿನಗಳು' – ದ್ವಿತೀಯ ಆವೃತ್ತಿ ಬಿಡುಗಡೆ ಕಂಡಿತು.

ಪುಸ್ತಕ ಬಿಡುಗಡೆ ಮಾಡಿ ಮಾತಾಡಿದ ಸಾಹಿತಿ, ಶ್ರೀನಿವಾಸ ವೈದ್ಯ ಸಾಹಿತ್ಯೇತರ ವೃತ್ತಿಯವರೂ ತಮ್ಮ ವೃತ್ತಿಯ ಅನುಭವಗಳನ್ನು ಬರೆದರೆ ಉತ್ತಮ ಓದುವ ಸರಕು ಆಗುತ್ತದೆ ಎಂದರು.



ಕನ್ನಡದ ಅಂದಿನ ಪ್ರಸಿದ್ಧ ಹಾಸ್ಯ ಪತ್ರಿಕೆ ಕೊರವಂಜಿ ಬಳಗದ ಬರಹಗಾರರಾದ ಎಚ್.ಆರ್. ಶಂಕರನಾರಾಯಣ 'ಹಾ.ರಾ.' ಎಂದೆ ಓದುಗರಿಗೆ ಪರಿಚಿತರು. ತಮ್ಮ ವಕೀಲಿ ದಿನಗಳ ಅನುಭವಗಳನ್ನು ತಿಳಿ ಹಾಸ್ಯದ ರೂಪದಲ್ಲಿ ಹೇಳಿದ ಅವರ ಪುಸ್ತಕದ ಎರಡನೆ ಆವೃತ್ತಿಯಿದು.

ಸಮಾರಂಭದಲ್ಲಿ ಹಾ.ರಾ. ಮಾತಾಡಿ 'ಹಾಸ್ಯ ಎಂದರೆ ಕೇಳಿದಾಗ ನಕ್ಕು ಮರೆತುಬಿಡುವಂಥ ಮಾತಲ್ಲ. ಅದು ಮನುಷ್ಯನನ್ನು ಸಂಸ್ಕಾರವಂತನನ್ನಾಗಿ ಮಾಡಬೇಕು. ದ್ವೇಷ–ತಿರಸ್ಕಾರ ಹುಟ್ಟಿಸುವಂತಹ ಹಾಸ್ಯ ಆರೋಗ್ಯಕರವಲ್ಲ', ಎಂದರು.

**ಪುಸ್ತಕಗಳ ಪ್ರತಿಗಳಿಗಾಗಿ ಸಂಪರ್ಕಿಸಿ : ಕೆ. ಸೂರ್ಯನಾರಾಯಣರಾವ್ ೯೮೪೫೫ ೨೯೪೪೮**

---

## Just ಮಾತ್ ಮಾತಲ್ಲಿ...

## ಮಧ್ಯಸ್ಥಿಕೆಯಿಂದ ಕ್ರಿಯಾತ್ಮಕ ಫಲಿತಾಂಶಗಳು

ಮಧ್ಯಸ್ಥಿಕೆಯಿಂದ ವಿಭಿನ್ನವಾದ ಮತ್ತು ಕ್ರಿಯಾತ್ಮಕ ಫಲಿತಾಂಶಗಳು ಸಾಧ್ಯ. ನ್ಯಾಯಾಲಯದ ನ್ಯಾಯ ಪ್ರಕ್ರಿಯೆಯಲ್ಲಿ ಪಕ್ಷಗಾರರ ಬೇಡಿಕೆ ಅನಿಸಿಕೆ ಮತ್ತು ಆಕಾಂಕ್ಷೆಗಳಿಗೆ ಹೆಚ್ಚಿನ ಆದ್ಯತೆ ಇಲ್ಲ. ಅಲ್ಲಿ ಎಲ್ಲಾ ಪರಿಹಾರಗಳು ಮತ್ತು ಬೇಡಿಕೆಗಳು ಕಾನೂನಿನ ಪರಿಮಿತಿಯೊಳಗಿರಬೇಕು. ಕಲ್ಪನಾಧಾರಿತ (Hypothetical) ಸಂದರ್ಭಗಳಿಗೆ ಮತ್ತು ನೈತಿಕ ಮೌಲ್ಯಗಳಿಗೆ ಅವಕಾಶವಿಲ್ಲ. ಆದರೆ ಮಧ್ಯಸ್ಥಿಕೆ ಇಂಥ ನ್ಯಾಯ ಪ್ರಕ್ರಿಯೆಯಿಂದ ಸಂಪೂರ್ಣ ಭಿನ್ನ. ಹೇಗೆಂದು ನೋಡೋಣ ಬನ್ನಿ.

ಪ್ರಸಾದ್ ಒಂದು ಸ್ಥಿರ ಸ್ವತ್ತಿನ ಮಾಲೀಕ. ರವಿ ಒಬ್ಬ ಡೆವೆಲಪರ್. ಇವರಿಬ್ಬರೂ ಸೇರಿ ಒಂದು ಜಂಟಿ–ಅಭಿವೃದ್ಧಿ(Joint Development) ಕರಾರನ್ನು ಮಾಡಿಕೊಂಡು ಬೆಂಗಳೂರಿನ ಪ್ರತಿಷ್ಠಿತ ಬಡಾವಣೆಯಲ್ಲಿ ಸುಮಾರು ೨೦ ಸಾವಿರ ಚದರ ಅಡಿ ಜಾಗದಲ್ಲಿ ಐವತ್ತಕ್ಕೂ ಹೆಚ್ಚು ಮನೆಗಳ ಸಮುಚ್ಚಯ(Flat)ವನ್ನು ಕಟ್ಟಲು ಯೋಜಿಸಿಕೊಂಡಿದ್ದರು. ಬೇಕಾದ ಅನುಮತಿ, ನಕ್ಷೆ ಪಡೆದು ಗುದ್ದಲಿ ಪೂಜೆ ನೆರವೇರಿಸಿದರು.



ಎಸ್.ಎನ್. ಪ್ರಶಾಂತ ಚಂದ್ರ,
snpchandra@gmail.com

ಆ ಸಮಯದಲ್ಲಿ ಕುಮಾರ್ ಕಟ್ಟಡದ ಕೆಲಸಕ್ಕೆ ಅಡಚಣೆ ಉಂಟುಮಾಡಿ ಈ ಸ್ಥಳದ ಒಂದು ಭಾಗದಲ್ಲಿ ತನಗೆ ಸೇರಿದ ೩ ಸಾವಿರ ಚ.ಅಡಿ ಜಾಗವಿದೆ ಎಂದು ಕ್ಲೇಮು ಮಾಡಿದರು. ಎರಡು ಪಕ್ಷಗಳ ನಡುವೆ ಸಾಕಷ್ಟು ಘರ್ಷಣೆ, ಪೊಲೀಸ್ ಕ್ರಂಪ್ಲೇಂಟ್, ರಾಜಕೀಯ ಒತ್ತಡ ಇತ್ಯಾದಿಗಳ ನಂತರ ಸಮಸ್ಯೆ ಬಗೆ ಹರಿಯದಿದ್ದರಿಂದ ಸಿವಿಲ್ ನ್ಯಾಯಾಲಯದಲ್ಲಿ ಎರಡೂ ಪಕ್ಷದವರು, ಬೇರೆ ಬೇರೆಯಾಗಿ ನಿರ್ಬಂಧಕಾಜ್ಞೆಯನ್ನು ಬೇಡಿ ದಾವೆ ಹೂಡಿದರು. ಸಿವಿಲ್ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಾಜ್ಞೆಯನ್ನು ನಿರಾಕರಿಸಿದ ಕಾರಣ, ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಹೂಡಿದರು. ಅಲ್ಲಿ ಪಕ್ಷಗಾರರ ಕೋರಿಕೆಯಂತೆ ಪ್ರಕರಣವನ್ನು ಮಧ್ಯಸ್ಥಿಕೆ ಕೇಂದ್ರಕ್ಕೆ ಕಳುಹಿಸಲಾಯಿತು.

> **ಮನಃಪೂರ್ವಕವಾದ win-win ಸಂದರ್ಭಗಳು ನ್ಯಾಯಾಲಯದಲ್ಲಿ ಸಾಧ್ಯವಿಲ್ಲ, ಸಾಧ್ಯವಾಗುವುದು ಕೇವಲ ಮಧ್ಯಸ್ಥಿಕೆಯಲ್ಲಿ.**

ಮಧ್ಯಸ್ಥಿಕೆ ಕೇಂದ್ರದಲ್ಲಿ ಪಕ್ಷಗಾರರ ಪರಿಚಯ, ಜಂಟಿ ಸಭೆ, ಖಾಸಗಿ ಸಭೆ ನಡೆದು ಮಧ್ಯಸ್ಥಿಕೆಯ ಲಾಭಾಂಶಗಳು ಮನವರಿಕೆಯಾಗುವಂತೆ ಸುಮಾರು ಏಳೆಂಟು ಗಂಟೆಗಳ ಕಾಲ ಮಧ್ಯಸ್ಥಿಕೆ ನಡೆಸಿದವು. ಇಬ್ಬರು ಪಕ್ಷಗಾರರೂ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲು ಸಿದ್ಧರಿರಲಿಲ್ಲ. ತಮ್ಮಿಬ್ಬರ ಆರ್ಥಿಕ ಬಲಾಬಲಗಳನ್ನು ಪ್ರತಿಪಾದಿಸುತ್ತಿದ್ದರು. ಹಿಂದೆ ನಡೆದ ಘಟನೆಗಳಿಂದ ಮನಸ್ಸಿನಲ್ಲಿ ಕಹಿ ತುಂಬಿಕೊಂಡಿದ್ದರು. ಸತತ ಪ್ರಯತ್ನದಿಂದ ಅವರಿಗೆ ಮಧ್ಯಸ್ಥಿಕೆಯ ಮೇಲೆ ವಿಶ್ವಾಸ ಮೂಡಿ ನಮ್ಮೊಂದಿಗೆ ಮುಕ್ತವಾಗಿ ಸಮಾಲೋಚಿಸಲಾರಂಭಿಸಿದರು. ಇದೆ ಒಂದು ಮಹತ್ವದ ಬೆಳವಣಿಗೆ. ನಂತರದ ದಿನಗಳಲ್ಲಿ ಅವರವರ ಬಂಧುಮಿತ್ರರನ್ನೂ ಮುಕ್ತ ಸಭೆಯಲ್ಲಿ ಭಾಗವಹಿಸಿ ತಮ್ಮ ತಮ್ಮ ಸಲಹೆ ಸೂಚನೆಗಳನ್ನು ಕೊಡಲಾರಂಭಿಸಿದರು.

ಪಕ್ಷಗಾರರ ಅನಿಸಿಕೆ, ಆಕಾಂಕ್ಷೆ, ಅಪೇಕ್ಷೆ ಮತ್ತು ವಾಸ್ತವದ ಅರಿವಿನಿಂದ ನನಗೆ ತಿಳಿದು ಬಂದದ್ದೇನೆಂದರೆ ಪ್ರಸಾದ್ ಮತ್ತು ರವಿ ತಾವು ನಿಯೋಜಿಸಿದ ೨೦ ಸಾವಿರ ಚ.ಅಡಿ ಗಿಂತ ಕಡಿಮೆ ಜಾಗದಲ್ಲಿ ಬಹುಮಹಡಿ ಕಟ್ಟಡ ಕಟ್ಟಿದರೆ ಅದು ಲಾಭಕಾರಿಯಾಗುವುದಿಲ್ಲ. ಕುಮಾರ ೩ ಸಾವಿರ ಚ.ಅಡಿ ಜಾಗದಲ್ಲಿ ಕಟ್ಟಡ ಬೈಲಾ ಪ್ರಕಾರ ಒಂದು ಚಿಕ್ಕ ಕಟ್ಟಡವನ್ನು ಕಟ್ಟುವುದು ಬಿಟ್ಟು ಬೇರೇನೂ ಮಾಡಲು ಸಾಧ್ಯವಿಲ್ಲ. ಅಂತಹ ಕಟ್ಟಡದಲ್ಲಿ ವಸತಿಗೆ ಮಾತ್ರ ಅನುಮತಿ ಇದ್ದು, ವಾಣಿಜ್ಯೋದ್ಯಮಕ್ಕೆ ಅವಕಾಶ ಇಲ್ಲ. ಪ್ರಸಾದ್ ಮತ್ತು ರವಿಯವರ ದೈತ್ಯಕಾರದ ಬಹುಮಹಡಿ ಕಟ್ಟಡ ಎದ್ದು ನಿಂತರೆ ಕುಮಾರ್ ಅವರ ಜಾಗಕ್ಕೆ ಬೆಲೆ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಪಕ್ಷಗಾರರು ಮೊದಲಿಗೆ ತಮ್ಮ ತಮ್ಮ ನಿಲುವನ್ನು ಪ್ರತಿಪಾದಿಸುತ್ತಿದ್ದರೂ ಕೊನೆಗೆ ಅವರಿಗೆ ತಮ್ಮ ತಮ್ಮ ನಿಲುವಿನಿಂದ ಅಂತಿಮ ನಿರ್ಣಯ ಅಸಾಧ್ಯ ಎಂಬ ಅರಿವಾಯಿತು. ಈ ವಿಚಾರ ಅವರನ್ನು ಕ್ರಿಯಾತ್ಮಕ ವಿಚಾರಗಳ ಕಡೆಗೆ ಪ್ರಚೋದಿಸಿತು. ಈ ಸಂದರ್ಭದಲ್ಲಿ ಪಕ್ಷಗಾರರು ಎಂತಹ ಕ್ರಿಯಾತ್ಮಕ ನಿರ್ಣಯ ತೆಗೆದುಕೊಂಡರೆಂದು ತಿಳಿಯೋಣ.

ಕುಮಾರ್ ತನ್ನ ೩ ಸಾವಿರ ಚದರ ಅಡಿ ಜಾಗದ ಮೇಲೆ ತನ್ನ ಸಂಪೂರ್ಣ ಹಕ್ಕನ್ನು ತ್ಯಜಿಸುವುದು; ವಸತಿ ಸಮುಚ್ಚಯದ ಯೋಜನೆಗೆ ಅನುಮತಿ ಕೊಡುವುದು ಮತ್ತು ಎಲ್ಲಾ ರೀತಿಯ ಸಹಕಾರವನ್ನು ನೀಡುವುದು; ಕುಮಾರ್ ಅವರ ಈ ತ್ಯಾಗಕ್ಕೆ ಪ್ರತಿಯಾಗಿ ಪ್ರಸಾದ್ ಮತ್ತು ರವಿ ತಾವು ಕಟ್ಟುತ್ತಿರುವ ಬಹುಮಹಡಿ ಕಟ್ಟಡದಲ್ಲಿ ಒಂದು ಸಾವಿರದ ಐದು ನೂರು ಚ.ಅಡಿ super built up areaವನ್ನು ಕುಮಾರ್‌ಗೆ ಕೊಡುವುದು ಎಂದು ನಿರ್ಣಯ ತೆಗೆದುಕೊಂಡರು. ಈ ನಿರ್ಣಯವನ್ನು ನ್ಯಾಯಾಲಯಕ್ಕೆ ತಿಳಿಸಿ ಈ ಪ್ರಕಾರ ನ್ಯಾಯಾಲಯದ ಡಿಕ್ರಿ ಪಡೆಯಲಾಯಿತು.

ಒಂದು ನಿಮಿಷ ಯೋಚಿಸಿ, ಈ ರೀತಿಯ ನಿರ್ಣಯಗಳ ಮತ್ತು ಅಂತಿಮ ತೀರ್ಮಾನಗಳು ನ್ಯಾಯಾಲಯದ ಪರಿಮಿತಿಯೊಳಗೆ ಸಾಧ್ಯವೆ? ನ್ಯಾಯಾಲಯದಲ್ಲಿನ ಬೇಡಿಕೆ ನಿರ್ಬಂಧಾಜ್ಞೆಗೆ ಮಾತ್ರ ಸೀಮಿತವಾಗಿರುವುದರಿಂದ ವಿಭಿನ್ನವಾದ ಮತ್ತು ಸೃಜನಶೀಲ ನಿರ್ಣಯಗಳನ್ನು ಪಡೆಯಲು ನ್ಯಾಯಾಲಯದ ಚೌಕಟ್ಟಿನಲ್ಲಿ ಅವಕಾಶವಿರುವುದಿಲ್ಲ. ಈ ರೀತಿಯಾದ ಮನಃಪೂರ್ವಕವಾದ ವಿನ್–ವಿನ್(win-win) ಸಂದರ್ಭಗಳು ಕೇವಲ ಮಧ್ಯಸ್ಥಿಕೆಯಲ್ಲಿ ಮಾತ್ರ ಸಾಧ್ಯ ಎಂಬುದು ನನ್ನ ಖಚಿತ ಅಭಿಪ್ರಾಯ. ಅಷ್ಟೇ ಅಲ್ಲ. ಪಕ್ಷಗಾರರು ಕಂಡುಕೊಂಡಂತಹ ಇಂತಹ ನಿರ್ಣಯಗಳಿಂದ ಪಕ್ಷಗಾರರ ನಡುವೆ ಒಲವು, ಬಾಂಧವ್ಯ ಹೆಚ್ಚಾಗಿ, ಭವಿಷ್ಯದಲ್ಲಿ ಹೆಚ್ಚಿನ ಲಾಭಗಳನ್ನು ಪಡೆಯಲು ಅವಕಾಶಗಳಿವೆ.

** ಪಕ್ಷಗಾರರ ಹೆಸರು ಬದಲಿಸಲಾಗಿದೆ.*